# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**284/2017** ಸಿ.ಡಬ್ಲ್ಯೂ –20 ಪಿ.ಡಬ್ಲೂ-೪

| | | |
|---|---|---|
| ಹೆಸರು | ಃ | ಕುಮಾರಿ ರುತುಜಾ |
| ತಂದೆ/ಗಂಡ | ಃ | ಬಳಿರಾಮ ಇಂಗಳೇ |
| ವ ಯಸ್ಸು | ಃ | ೨೮ ವರ್ಷ |
| ಉದ್ಯೋಗ | : | ವಿದ್ಯಾರ್ಥಿನಿ |
| ವಾಸಸ್ಥಳ | ಃ | ಕನಗರ, ಉಸ್ಮಾನಾಬಾದ |

ದಿನಾಂಕಃ೨೭.೧೨.೨೦೧೮

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನನಗೆ ಚಾಸಾ-1, 17, 19, 21, 22, 27, 28 ರವರ ಪರಿಚಯ ಇರುತ್ತದೆ. ಈ ಪ್ರಕರಣದಲ್ಲಿನ ಮೃತ 9 ಜನರ ಪರಿಚಯ ಇರುತ್ತದೆ. ಆರೋಪಿ ನನಗೆ ಗೊತ್ತು.

ನಾವು ದಿನಾಂಕ: 19.07.2016 ರಂದು ದೇವರ ದರ್ಶನಕ್ಕಾಗಿ ಕನಗರ ದಿಂದ ಗಾಣಗಾಪೂರಕ್ಕೆ ಹೋಗುತ್ತಿದ್ದೆವು. ನಾವು ಕ್ರೂಜರನಲ್ಲಿ ಹೋಗುತ್ತಿದ್ದೆವು, ಅಪಘಾತವು ಡೋಗಿನಾಲಾದ ಹತ್ತಿರ ಆಗಿರುತ್ತದೆ. ನಮ್ಮ ಕ್ರೂಜರ ಚಾಸಾ-28 ರವರು ಚಲಾಯಿಸುತ್ತಿದ್ದರು. ಎಂ.ಹೆಚ್.12-7368 ಎಂಬ ಲಾರಿಯು ವೇಗವಾಗಿ ಅಡ್ಡಾದಿಡ್ಡಿಯಾಗಿ ಬಂದು ನಮಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ನಮ್ಮ ಕ್ರೂಜರನಲ್ಲಿರುವ 9 ಜನರು ಮೃತಪಟ್ಟಿರುತ್ತಾರೆ. ಉಳಿದ 13-14 ಜನರು ಇದ್ದರು. ಸದರಿ ಅಪಘಾತದಲ್ಲಿ ನನಗೆ ಬಾಯಿ ಮೇಲೆ ಮತ್ತು ಸೊಂಟದ ಮೇಲೆ ಗಾಯವಾಗಿರುತ್ತದೆ. ಸದರಿ ಅಪಘಾತದ ನಂತರ ನನ್ನನ್ನು ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಎಷ್ಟು ಜನರನ್ನು ಕರೆದುಕೊಂಡು ಹೋದರು ಎಂದು ನನಗೆ ನೆನಪಿಲ್ಲ ಏಕೆಂಧರೆ ನನಗೆ ತಲೆಗೆ ಗಾಯವಾಗಿ ಮೂರ್ಛೆ ಹೋಗಿದ್ದೆ. ಎದುರುಗಡೆಯ ಲಾರಿಯನ್ನು ಸಂಜಯ ಸಿಂಗೆ ಆರೋಪಿ ಚಲಾಯಿಸುತ್ತಿದ್ದನು, ಅವರನ್ನು ನೋಡಿದರೆ ಗುರುತಿಸುತ್ತೇನೆ. ನಾನು ಆರೋಪಿತನನ್ನು ಆಳಂದ ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ, ಆತ ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುತ್ತಾನೆ. ಸದರಿ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ**

ನಾನು ಕ್ರೂಜರನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದೆ. ನಾನು ಕುಳಿತಲ್ಲಿಂದ ಮುಂದಿನ ರಸ್ತೆ ಕಾಣುತ್ತಿರಲಿಲ್ಲ. ಘಟನೆ ಆದ ನಂತರ ನನಗೆ ಪ್ರಜ್ಞೆ ತಪ್ಪಿತ್ತು. ನನಗೆ ಪ್ರಜ್ಞೆ ಉಸ್ಮಾನಾಬಾದನಲ್ಲಿ ಬಂದಿತ್ತು, ಎಷ್ಟು

ದಿನವಾದ ನಂತರ ಬಂತು ನನಗೆ ನೆನಪಿಲ್ಲ. ನನಗೆ ಪ್ರಜ್ಞೆ ಬರುವ ಮುಂಚೆ ಏನಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಡೋಗಿಬನ ನಾಲಾದ ಎರಡು ಬದಿಯಲ್ಲಿ ಬೆಟ್ಟಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡೋಗಿಬನ ನಾಲಾದ ಬಳಿ ಎಲ್ ಆಕಾರದ ತಿರುವು ಇದೆ ಎಂದರೆ ಸರಿ. ಅಲ್ಲಿ ಎಲ್ ಆಕಾರದಲ್ಲಿ ರಸ್ತೆ ಇರುವುದರಿಂದ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ನಮ್ಮ ವಾಹನ ಎಡಬದಿಯಲ್ಲಿ ಹೋಗುತ್ತಿತ್ತು, ಎದುರುಗಡೆ ವಾಹನ ಯಾವ ಬದಿಯಲ್ಲಿ ಬರುತ್ತಿತ್ತು ನನಗೆ ಗೊತ್ತಿಲ್ಲ. ಎದುರುಗಡೆಯ ವಾಹನವು ಸಹ ಆ ವಾಹನದ ಎಡಬದಿಯಲ್ಲೇ ಬರುತ್ತಿತ್ತು ಎಂದರೆ ನನಗೆ ನೆನಪಿಲ್ಲ. ನಮ್ಮ ಕ್ರೂಜರನಲ್ಲಿ 13-14 ಜನರಿದ್ದೆವು. ನಮ್ಮ ವಾಹನದ ಚಾಲಕನ ತಪ್ಪಿನಿಂದ ಸದರಿ ಘಟನೆ ಆಗಿದೆ ಎಂದರೆ ಸರಿ ಅಲ್ಲ. ಸದರಿ ಅಪಘಾತದಲ್ಲಿ ಲಾರಿಯ ಚಾಲಕನ ಯಾವುದೇ ತಪ್ಪು ಇಲ್ಲ ಎಂಧರೆ ಸರಿ ಅಲ್ಲ.

ಎದುರುಗಡೆ ವಾಹನ ಅಡ್ಡಾದಿಡ್ಡಿಯಾಗಿ ವೇಗವಾಗಿ ಬರುತ್ತಿತ್ತು ಎಂದು ನಾನು ಹೇಳುತ್ತಿರುವುದು ಸುಳ್ಳು ಎಂಧರೆ ಸರಿ ಅಲ್ಲ. ಎಲ್ ಆಕಾರದಲ್ಲಿ ತಿರುವು ಇರುವುದರಿಂದ ವಾಹನವು ಎದುರುಗಡೆಯಿಂದ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿ ಅಲ್ಲ. ನಮ್ಮ ವಾಹನದ ಬ್ರೇಕ್ ಫೇಲ್ ಆಗಿದ್ದರಿಂದ ನಮ್ಮ ವಾಹನವು ಎದುರುಗಡೆ ಲಾರಿಗೆ ಡಿಕ್ಕಿಪಡಿಸಿದ್ದರಿಂದ ಸದರಿ ಘಟನೆ ಆಗಿದೆ ಎಂಧರೆ ಸರಿ ಅಲ್ಲ. ಪರಿಹಾರಕ್ಕಾಗಿ ನಾವು ಉಸ್ಮಾನಾಬಾದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ಚಾಲಕನ ತಪ್ಪಿನಿಂದ ಈ ಅಪಘಾತ ಆಗಿಲ್ಲ ಎಂಧರೆ ಸರಿ ಅಲ್ಲ. ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸದರಿ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲ.

(ಸಾಕ್ಷಿಯು ಹಿಂದಿಯಲ್ಲಿ ತನ್ನ ಸಾಕ್ಷ್ಯ ನುಡಿದಿರುವುದರಿಂದ, ಉಭಯ ವಕೀಲರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಮತ್ತು ನ್ಯಾಯಾಧೀಶರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಅವರ ಸಾಕ್ಷ್ಯವನ್ನು ಕನ್ನಡದಲ್ಲಿ ಬರೆದುಕೊಳ್ಳಲಾಯಿತು).
ಮರುವಿಚಾರಣೆ: ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ,ಆಳಂದ